

# ಕುಬ್ಜನೋ ಕಬ್ಜನೋ?

ಅದು ಆರ್. ಚಂದ್ರು ಮತ್ತು ಉಪೇಂದ್ರ ಕಾಂಬಿನೇಷನ್‌ನ ಹೊಸ ಸಿನಿಮಾ 'ಕಬ್ಜ' ಪೂಜಾ ಕಾರ್ಯಕ್ರಮ. ಅಲ್ಲಿಗೆ ಬಂದಿದ್ದ ಹಲವರಿಗೆ ಆ ಸಿನಿಮಾದ ಹೆಸರು ಮನಸೊಳಗೆ ಇಳಿದಿರಲಿಲ್ಲ. ಪೋಸ್ಟರ್‌ಗಳನ್ನು ನೋಡಿದರೆ ಓದಿಕೊಳ್ಳುವುದೂ ಅಷ್ಟು ಸುಲಭ ಇರಲಿಲ್ಲ. ಹಾಗಾಗಿ ಅವರವರ ಭಾವಕ್ಕೆ ದಕ್ಕಿದ ಹಾಗೆ ಓದಿಕೊಂಡು ಒಂದಿಷ್ಟು ಜನ 'ಕುಬ್ಜ' ಎಂದು ಕರೆಯುತ್ತಿದ್ದರು. ನಿರ್ದೇಶಕ ಆರ್. ಚಂದ್ರು ಎಂಥ ಉದಾರಿಯೆಂದರೆ ಅವರು ಮಾಡುತ್ತಿದ್ದ ತಪ್ಪನ್ನು ತಿದ್ದುವ ಪ್ರಯತ್ನವನ್ನೂ ಮಾಡಲಿಲ್ಲ. ಬಹುಶಃ ಅವರು ಹೇಳುತ್ತಿರುವುದೂ ಸತ್ಯವೇ ಎಂದು ಅವರಿಗೆ ಅನಿಸಿರಲಿಕ್ಕೂ ಸಾಕು!

ಅಂದಹಾಗೆ 2020ನೇ ವರ್ಷವನ್ನು 'ಕಬ್ಜ' ಚಿತ್ರೀಕರಣದ ಜೊತೆ ಆಚರಿಸಿಕೊಳ್ಳಲು ನಿರ್ಧರಿಸಿದ್ದಾನೆ. ಜ. 02ರಿಂದ ಹೈದರಾಬಾದ್‌ನಲ್ಲಿ ಚಿತ್ರೀಕರಣ ಆರಂಭವಾಗಲಿದೆ. ಈ ಪಾತ್ರಕ್ಕಾಗಿ ಉಪೇಂದ್ರ ಸಕಲ ಸಿದ್ಧತೆಯನ್ನೂ ನಡೆಸಿದ್ದಾರೆ.

ಇದು ಪಕ್ಕಾ ಗ್ಯಾಂಗ್‌ಸ್ಟರ್ ಕಥೆ. 1947ರಿಂದ 1984ರವರೆಗಿನ ಕಾಲದಲ್ಲಿ ನಡೆಯುವ ಕಥೆಯನ್ನು ಅದ್ದೂರಿಯಾಗಿ ತೋರಿಸಲು ಚಂದ್ರು ಸಜ್ಜಾಗಿದ್ದಾರೆ. ಚಂದ್ರು ಸಿನಿಮಾ ಅಂದ ಮೇಲೆ ಕೇಳಬೇಕೇ? ಒಳಗಿನ ಚಾಕೊಲೇಟ್ ಹೇಗಾದರೂ ಇರಲಿ, ಹೊರಗಿನ ರ್‍ಯಾಪರ್ ಮಾತ್ರ ಕಣ್ಣು ಕೋರೈಸುವಷ್ಟು ಪ್ರಕಾಶಮಾನವಾಗಿ ಇರುತ್ತದೆ. ಜೊತೆಗೆ ಉಪೇಂದ್ರ ಅವರ ಚಿತ್ರವಿಚಿತ್ರ ಸ್ಟೈಲ್‌ಗಳ ಮೇಲಾಟದ ಜೊತೆಯೂ ಸಿಕ್ಕರಂತೂ ಫಲಿತಾಂಶ ಏನಾಗುತ್ತದೆ ಎಂಬುದನ್ನು ಊಹಿಸಿಕೊಳ್ಳಲು 'ಐ ಲವ್ ಯು' ಸಿನಿಮಾ ನೆನಪಿಸಿಕೊಂಡರೆ ಸಾಕು.

'ಐ ಲವ್ ಯು' ಸಿನಿಮಾವನ್ನು ಎರಡು ಭಾಷೆಗಳಲ್ಲಿ ಬಿಡುಗಡೆ ಮಾಡಲಾಗಿತ್ತು. ಆದರೆ ಬಿಡುಗಡೆಯಾದ ಎರಡೂ ಭಾಷೆಗಳಲ್ಲಿಯೂ ನಿರ್ಮಾಪಕರೇ ಚಿತ್ರಮಂದಿರಗಳ ಟಿಕೆಟ್ ಬುಕ್ ಮಾಡಬೇಕಾದ ಪರಿಸ್ಥಿತಿ ಬಂದಿದ್ದರಿಂದ ಈ ಸಲ ಇನ್ನೂ ಎತ್ತರಕ್ಕೆ ಜಿಗಿಯುವ ಕನಸನ್ನು ಚಂದ್ರು ಕಾಣುತ್ತಿದ್ದಾರೆ. ಪರಿಣಾಮವಾಗಿ 'ಕಬ್ಜ' ಏಳು ಭಾಷೆಗಳಲ್ಲಿ ಬಿಡುಗಡೆಯಾಗುತ್ತಿದೆ. ಏಳು ಕೆರೆಯ ನೀರು ಕುಡಿಯುವ ಚಂದ್ರು ಉತ್ಸಾಹದ ಪರಿಣಾಮ ಏನಾಗುವುದೋ ಕಾದು ನೋಡಬೇಕು.

# ನಿಖಿಲ್ ಹೊಸ ಅವತಾರ



ಮಂಡ್ಯ ಉಪಚುನಾವಣೆಗೆ 'ಸೀತಾರಾಮ ಕಲ್ಯಾಣ'ದ ಮೂಲಕ ಸಿದ್ಧನಾಗಿ ಕಣಕ್ಕಿಳಿದಿದ್ದ ನಿಖಿಲ್ ಕುಮಾರಸ್ವಾಮಿಗೆ ಜನರು ಸಿನಿಮಾದಲ್ಲಿಯೂ ಚುನಾವಣೆಯಲ್ಲಿಯೂ ಸೋಲಿನ ಕಹಿಗುಳಿಗೆ ಉಣಿಸಿದ ಬಳಿಕ ಕೊಂಚ ಮೆತ್ತಗಾಗಿದ್ದರು. ನಂತರ ಅವರು ಅಭಿಮನ್ಯುವಾಗಿ ನಟಿಸಿದ 'ಕುರುಕ್ಷೇತ್ರ' ಸಿನಿಮಾ ತೆರೆಕಂಡಿತಾದರೂ ಅವರು ಸೋಲಿನ ಚಿಪ್ಪೊಳಗಿಂದ ಹೊರಗೆ ಬಂದಿರಲಿಲ್ಲ. ಈ ನಡುವೆಯೇ ನಿಖಿಲ್, 'ಪೈಲ್ವಾನ್' ಕೃಷ್ಣ ನಿರ್ದೇಶನದ ಸಿನಿಮಾದಲ್ಲಿ ನಟಿಸಲಿದ್ದಾರೆ ಎಂಬ ಸುದ್ದಿಯೂ ಹೊರಬಿದ್ದಿತ್ತು. ಆದರೆ ಈಗ ನಿಖಿಲ್ ಇನ್ನೊಂದು ಸುದ್ದಿಯನ್ನು ಜಾಹೀರುಗೊಳಿಸಿದ್ದಾರೆ. ಅವರ ಮುಂದಿನ ಸಿನಿಮಾಗೆ ಟಾಲಿವುಡ್ ನಿರ್ದೇಶಕ ವಿಜಯ್‌ಕುಮಾರ್ ಕೊಂಡ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎಂಬುದೇ ಆ ಸುದ್ದಿ.

ಹಾಗಾದರೆ ಕೃಷ್ಣ ನಿರ್ದೇಶನದ ಸಿನಿಮಾವನ್ನು ಕೈಬಿಟ್ಟರೆ? 'ಹಾಗೇನೂ ಇಲ್ಲ. ಆ ಸಿನಿಮಾದ ಕಥೆಯ ಬರವಣಿಗೆ ಕೆಲಸಗಳು ನಡೆಯುತ್ತಿವೆ. ಹಾಗಾಗಿ ಇದಕ್ಕಿಂತ ಮೊದಲು ವಿಜಯ್‌ಕುಮಾರ್ ಅವರ ಸಿನಿಮಾ ಮುಗಿಸಿಬಿಡೋಣ ಎಂದು ನಿರ್ಧರಿಸಿದ್ದೇನೆ' ಎಂದು ನಿಖಿಲ್ ಮಾಧ್ಯಮಗಳಿಗೆ ಸ್ಪಷ್ಟನೆಯನ್ನೂ ನೀಡಿದ್ದಾರೆ. ಲಹರಿ ಮತ್ತು ಟಿ ಸಿರೀಸ್ ಕಂಪನಿಗಳು ಸೇರಿಕೊಂಡು ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿವೆಯಂತೆ. ಅಂದಮೇಲೆ ದೊಡ್ಡ ಬಜೆಟ್ ಸಿನಿಮಾ ಇದು ಎನ್ನುವುದಂತೂ ಖಾತ್ರಿ. ಹಾಗೆ ನೋಡಿದರೆ ನಿಖಿಲ್ ನಟಿಸಿದ ಹಿಂದಿನ ಯಾವ ಸಿನಿಮಾಗಳೂ ಬಜೆಟ್‌ನಲ್ಲಿ ಸಣ್ಣ ಪ್ರಮಾಣದವೇನೂ ಅಲ್ಲ. ಆದರೆ ಗಳಿಕೆಯಲ್ಲಿ ದೊಡ್ಡದಾಗಲೂ ಸಾಧ್ಯವಾಗಲಿಲ್ಲ.

ಈಗ ನಿಖಿಲ್ ಚುನಾವಣೆಗಳ ಗದ್ದಲ ಮುಗಿದು ಕೊಂಚ ನಿರಾಳರಾಗಿದ್ದಾರೆ. ಹಾಗಾಗಿ ಒಂದರ ಹಿಂದೆ ಒಂದರಂತೆ ಸಿನಿಮಾಗಳನ್ನು ಒಪ್ಪಿಕೊಂಡಿದ್ದಾರೆ. ಕಳೆದ ಮೂರು ಸಿನಿಮಾಗಳಲ್ಲಿಯೂ ತಕ್ಕಮಟ್ಟಿಗೆ ತನ್ನ ಕುಟುಂಬ, ತಂದೆಯ ಗುಣಗಾನ ಪ್ರಚಾರಗಳನ್ನು ಸಾಕಷ್ಟು ಮಾಡಿ ಮುಗಿಸಿರುವುದರಿಂದ ತಮ್ಮ ಮುಂದಿನ ಸಿನಿಮಾಗಳಲ್ಲಿ ನಿಖಿಲ್, ಸಿನಿಮಾಗೆ ಅಗತ್ಯವಾದ ಕಥೆಯ ಕಡೆಗೆ ಗಮನ ತೋರಬಹುದು. ಅದು ಅವರನ್ನು ಗೆಲುವಿನ ದಡಕ್ಕೆ ತಾಕಿಸಲೂಬಹುದು.